5. ಹಾಗಿದ್ದಲ್ಲಿ, ಇದನ್ನು ಕೂಡಲೇ ಅಭಿವೃದ್ಧಿಪಡಿಲು ಸರ್ಕಾರ ಯೋಜನೆಯನ್ನು ಹಾಕಿಕೊಳ್ಳುವುದೇ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

1. ಹೌದು.

2. ಹೌದು.

3. ಗುಲ್ಬರ್ಗಾ ಹೊಸೂರು ರಸ್ತೆಯ ಕೊನೆಯ 6.00 ಕಿಮೀ ಡಾಂಬರೀಕರಣವಾಗಿದ್ದು (ಡಬ್ಲ್ಯೂ.ಬಿ.ಎಮ್.) ಮೂರು ವಾರ್ಷಿಕ ಯೋಜನೆಯಡಿಯಲ್ಲಿ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲಾಗುವುದು.

4. ರಾಜ್ಯ ಹೆದ್ದಾರಿಗಳ ರಸ್ತೆಗಳ ಕೆಲವೊಂದು ಕಡೆ ಈ ರೀತಿ ಇರುತ್ತದೆ. ಆದರೆ ಗುಲ್ಬರ್ಗಾ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಇತರ ಯಾವುದೇ ರಾಜ್ಯ ಹೆದ್ದಾರಿ ರೀ ರೀತಿ ಇರುವುದಿಲ್ಲ.

5. 2005–08ನೇ ಸಾಲಿಗಾಗಿ ಗುಲ್ಬರ್ಗಾ ಹೊಸೂರು ರಾಜ್ಯ ಹೆದ್ದಾರಿ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ರೂ.299.40 ಲಕ್ಷ ಅಂದಾಜು ಮೊತ್ತಕ್ಕೆ ಕಾಮಗಾರಿಯನ್ನು ಟೆಂಡರ್ ಮುಖಾಂತರ ಕೈಗೊಳ್ಳಲಾಗುತ್ತಿದೆ.

5299 (6082) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಳೆ ಮೈಸೂರಿನಲ್ಲಿರುವ ಲೋಕೋಪಯೋಗಿ ಇಲಾಖೆಯ ಕಟ್ಟಡಗಳೆಷ್ಟು ಹಾಗೂ ಅವುಗಳ ನಿರ್ವಹಣೆಗೆ ವರ್ಷಕ್ಕೆ ತಗಲುವ ವೆಚ್ಚವೆಷ್ಟು;

ಆ) ಹೈದರಾಬಾದ್–ಕರ್ನಾಟಕ ಹಾಗೂ ಉತ್ತರ ಕರ್ನಾಟಕದಲ್ಲಿರುವ ಲೋಕೋಪಯೋಗಿ ಇಲಾಖೆಯ ಕಟ್ಟಡಗಳೆಷ್ಟು; ಅವುಗಳ ನಿರ್ವಹಣೆಗೆ ವರ್ಷಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹಳೇ ಮೈಸೂರಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಒಟ್ಟು ಕಟ್ಟಡ ಸಂಖ್ಯೆ: 7279.

ಅವುಗಳ ನಿರ್ವಹಣೆಗಾಗಿ ವರ್ಷಕ್ಕೆ ತಗಲುವ ವೆಚ್ಚ ರೂ. 2676.54 ಲಕ್ಷಗಳು.

ಆ) ಹೈದರಾಬಾದ್–ಕರ್ನಾಟಕ ಹಾಗೂ ಉತ್ತರ ಕರ್ನಾಟಕದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಒಟ್ಟು ಕಟ್ಟಡಗಳ ಸಂಖ್ಯೆ: 4113.

ಅವುಗಳ ನಿರ್ವಹಣೆಗಾಗಿ ವರ್ಷಕ್ಕೆ ತಗಲುವ ವೆಚ್ಚ ರೂ.2093.23 ಲಕ್ಷಗಳು.

5300 (5998) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಬರಗಾಲ ಪರಿಹಾರ ಕಾಮಗಾರಿಗಳ ಯೋಜನೆ ಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಒಟ್ಟು ಎಷ್ಟು ಕಾಮಗಾರಿಗಳನ್ನು ಗುತ್ತಿಗೆ ದಾರರಿಂದ ಕೈಗೊಳ್ಳಲಾಗಿದೆ;

ಆ) ಆ ಕಾಮಗಾರಿಗಳಿಗಾಗಿ ನಿಗದಿ ಪಡಿಸಿದ ಮೊತ್ತ ಎಷ್ಟು;

ಇ) ಸದರಿ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಲಾಗಿದೆಯೇ ಹಾಗೂ ಇಲ್ಲವಾದಲ್ಲಿ ಕಾರಣಗಳೇನು;

ಈ) ಹಾಗಿದ್ದಲ್ಲಿ, ಈ ಬಾಕಿ ಹಣವನ್ನು ಸಕಾಲದಲ್ಲಿ ಪಾವತಿ ಮಾಡಿ ಗ್ರಾಮಾಂತರಗಳಲ್ಲಿ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಗುತ್ತಿಗೆದಾರರನ್ನು ಪ್ರೋತ್ಸಾಹಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಬರಪರಿಹಾರ ಕಾಮಗಾರಿಗಳ ಯೋಜನೆಯಡಿಯಲ್ಲಿ ಜಿಲ್ಲಾಧಿಕಾರಿಯವರ ಬರಪರಿಹಾರ ಯೋಜನೆಯಡಿ ಒಟ್ಟು 112 ಕಾಮಗಾರಿಗಳನ್ನು ಹಾಗೂ ಜಿಲ್ಲಾ ಪಂಚಾಯತ್‌ನಿಂದ 376 ಕಾಮಗಾರಿಗಳನ್ನು ಗುತ್ತಿಗೆದಾರರಿಂದ ಕೈಗೊಳ್ಳಲಾಗಿದೆ.

ಆ) ಜಿಲ್ಲಾಧಿಕಾರಿಗಳಿಂದ ನಿಗಧಿ ಪಡಿಸಿದ ಮೊತ್ತ ರೂ.143.93 ಲಕ್ಷಗಳಾಗಿರುತ್ತದೆ ಹಾಗೂ ಜಿಲ್ಲಾ ಪಂಚಾಯತ್‌ನಿಂದ ಇದುವರೆಗೂ ರೂ.149.20 ಲಕ್ಷ ನಿಗದಿ ಪಡಿಸಲಾಗಿರುತ್ತದೆ.

ಇ) ಕಾಮಗಾರಿಗಳಿಗಾಗಿ ಜಿಲ್ಲಾಧಿಕಾರಿಗಳ ಬರಪರಿಹಾರ ನಿಧಿಯಡಿ ನಿಗಧಿ ಪಡಿಸಿರುವ ಮೊತ್ತದಲ್ಲಿ ಈವರೆಗೆ ಒಟ್ಟು ರೂ.97.16 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ರೂ.86.06 ಖರ್ಚಾಗಿರುತ್ತದೆ.

ಈ) ಬಿಡುಗಡೆಯಾದ ಹಣದಲ್ಲಿ ಕಾಮಗಾರಿಗಳ ಹಂತಕ್ಕನುಗುಣವಾಗಿ ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

5301 (6122) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಮತ್ತು ಗ್ರಾಮಸ್ಥರು ಸೇರಿ ರಚಿಸಿಕೊಳ್ಳುವ ಅರಣ್ಯ ಗ್ರಾಮ ಸಮಿತಿಗಳನ್ನು ಎಷ್ಟು ಗ್ರಾಮಗಳಲ್ಲಿ ರಚಿಸಲಾಗಿದೆ;

ಆ) ಅರಣ್ಯ ಸಮಿತಿಗಳ ಜವಾಬ್ದಾರಿಗಳೇನು;

ಇ) ಈ ಗ್ರಾಮ ಸಮಿತಿಗಳು ಯಾವ ವರ್ಷದಿಂದ ಕಾರ್ಯಾರಂಭ ಮಾಡಿವೆ;

ಈ) ಈ ಸಮಿತಿಗಳಿಗೆ ಸರ್ಕಾರದಿಂದ ನೀಡಲಾಗುವ ಆರ್ಥಿಕ ನೆರವೆಷ್ಟು? (ವಿವರ ನೀಡುವುದು)

ಶ್ರೀ ಗುರುಪಾದಪ್ಪನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 50 ಗ್ರಮ ಅರಣ್ಯ ಸಮಿತಿಗಳನ್ನು ಇಲ್ಲಿಯವರೆಗೂ ರಚಿಸಲಾಗಿದ್ದು, ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ 31 ಗಮ ಅಣ್ಯ ಸಮಿತಿಗಳ ವಿವರಣೆ ಈ ಕೆಳಕಂಡಂತಿದೆ: